# ನಾನು ಕೊಂದ ಉಡ



ಆನಂದರ 'ನಾನು ಕೊಂದ ಹುಡುಗಿ' ಕನ್ನಡದ ಪ್ರಸಿದ್ಧ ಕಥೆಗಳಲ್ಲೊಂದು. ಆ ಕಥೆಯನ್ನು ನೆನಪಿಸುವ ಉಡವೊಂದರ ಅವಸಾನದ ಈ ಕಥೆ, ಲೇಖಕಿಯ ಪಾಪಪ್ರಜ್ಞೆಯನ್ನು ಕಾಣಿಸುವುದರೊಂದಿಗೆ ಪ್ರಾಣಿಕಾಳಜಿಯ ಪಾಠವೊಂದನ್ನು ಸಹೃದಯರಿಗೆ ದಾಟಿಸುತ್ತಿದೆ.

■ ಸಹನಾ ಕಾಂತಬೈಲು

ಮಧ್ಯಾಹ್ನ 12ರ ಸಮಯ. ನಾನು ಅಡುಗೆಮನೆಯಲ್ಲಿ ತರಕಾರಿ ಕತ್ತರಿಸುತ್ತಿದ್ದೆ. ಮನೆಯ ಎದುರು ಭಾಗದಿಂದ ಮಗ 'ಅಮ್ಮಾ, ಅಮ್ಮಾ ಬೇಗ ಬಾ' ಎಂದು ಬೆದರಿದ ದನಿಯಿಂದ ಕರೆಯುವುದು ಕೇಳಿಸಿತು. ನಾನು ಮಾಡುತ್ತಿದ್ದ ಕೆಲಸವನ್ನು ಅಲ್ಲೇ ಬಿಟ್ಟು ಅವನಿರುವಲ್ಲಿಗೆ ಓಡಿದೆ. ನನ್ನ ಕೈಯನ್ನು ಹಿಡಿದೆಳೆಯುತ್ತ 'ಇಲ್ಲಿ ನೋಡು, ಡೈನೊಸಾರ್‌ನ ಹಾಗೆ ಕಾಣಿಸುತ್ತಿದೆ. ಇದು ಯಾವ ಜೀವಿ?' ಎಂದು ಕೇಳಿದ.

ಮನೆಯ ಹೊರಗಿನ ಜಗಲಿಯಲ್ಲಿ ನಾಲ್ಕು ಕಾಲುಗಳಿಂದ ಪುಟುಪುಟುನೆ ಓಡುತ್ತಿರುವ ಅದನ್ನು ನೋಡಿದೆ. ಹೊಳೆಯುವ ಕಪ್ಪು ಬಣ್ಣ ಹೊಂದಿದ ಅದರ ಮೈಮೇಲೆ ಅಲ್ಲಲ್ಲಿ ಬಿಳಿ ಚುಕ್ಕೆಗಳಿದ್ದವು. ಸಪೂರ ಉದ್ದ ಬಾಲ, ಚೂಪಾದ ಉಗುರನ್ನು ಹೊಂದಿದ ಬೆರಳುಗಳು. ಓಡುವಾಗ ನಾಲಿಗೆಯನ್ನು ಎರಡು ಇಂಚಿನಷ್ಟು ಉದ್ದಕ್ಕೆ ಹೊರಗೆ ಚಾಚುತ್ತಿತ್ತು. ಪಕ್ಕನೆ ನೋಡುವಾಗ ಕಟ್ಟದ ಹಾವಿನಂತೆ ಕಾಣುತ್ತಿತ್ತು ಅಥವಾ ಚಿಕ್ಕ ಮೊಸಳೆಯ ಹಾಗೆ ಎಂದರೂ ಸರಿಯೇ. ಜಗಲಿಯ ಒಂದು ಬದಿಯಲ್ಲಿ ಅವನು; ಇನ್ನೊಂದು ಬದಿಯಲ್ಲಿ ನಾನು. ಪಾಪ, ಅದಕ್ಕೆ ಎಲ್ಲಿಗೆ ಹೋಗಬೇಕು, ಏನು ಮಾಡಬೇಕು ಎಂದು ಗೊತ್ತಾಗಲಿಲ್ಲ. ಹುಚ್ಚು ಹಿಡಿದಂತೆ ಜಗಲಿಯಲ್ಲಿ ಒಟ್ಟೊ ಓಡಲು ಶುರುಮಾಡಿತು. ಕೊನೆಗೆ ಜಗಲಿಯ ಒಂದು ತುದಿಯಲ್ಲಿರುವ ನನ್ನ ಪುಸ್ತಕ ರ್‍ಯಾಕ್‌ನ ಕೆಳಭಾಗದ ನೆಲದಲ್ಲಿ ಸುಮ್ಮನೆ ಬಿದ್ದುಕೊಂಡಿತು.

'ಇದು ಉಡ ಎಂಬ ಪಾಪದ ಪ್ರಾಣಿ. ಅಳಿವಿನಂಚಿನಲ್ಲಿದೆ. ಸ್ಥಳೀಯ ಭಾಷೆಯಲ್ಲಿ ಉಡು ಎಂದು ಕರೆಯುತ್ತಾರೆ. ವಿಷಜಂತುವಲ್ಲ, ಕಚ್ಚುವುದಿಲ್ಲ, ನಿರುಪದ್ರವಿ ಜೀವಿ. ದಾರಿ ತಪ್ಪಿ